# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ : 757

ಸದಸ್ಯರ ಹೆಸರು : ಶ್ರೀ. ಎನ್.ಎಸ್. ಬೋಸ್ ರಾಜು

ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 17.12.2018

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯಲ್ಲಿರುವ ತೋಟಗಾರಿಕೆ ಇಲಾಖೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: | ರಾಯಚೂರು ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 2018-19ನೇ ಸಾಲಿನಲ್ಲಿ ಕೆಳಕಾಣಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.<br>1) ಕೇಂದ್ರವಲಯ, ರಾಜ್ಯವಲಯ ಮತ್ತು ಜಿಲ್ಲಾವಲಯ ಯೋಜನೆಯಡಿ ಒಟ್ಟಾರೆ ರೂ.15.66 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>2) ಈ ಯೋಜನೆಗಳಡಿಯಲ್ಲಿ ನವೆಂಬರ್-2018ರ ಮಾಹೆಯ ಅಂತ್ಯಕ್ಕೆ ರೂ.4.95 ಕೋಟಿ ಅನುದಾನ ವಿನಿಯೊಗಿಸಲಾಗಿದೆ.<br>3) ಸಾಧಿಸಲಾದ ಪ್ರಗತಿ ವರದಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ ಪಟ್ಟಣ ಹಾಗೂ ರಾಜಲಬಂಡಾದಲ್ಲಿ ಇರುವ ತೋಟಗಾರಿಕೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ ಪಟ್ಟಣ ಹಾಗೂ ರಾಜಲಬಂಡಾದಲ್ಲಿ ಇರುವ ತೋಟಗಾರಿಕೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳ ವಿವರ ಕೆಳಕಂಡಂತಿವೆ.<br>1) ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ತೋಟಗಾರಿಕೆ ಕ್ಷೇತ್ರವನ್ನು 2017-18ನೇ ಸಾಲಿನಲ್ಲಿ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಕೃಷಿಹೊಂಡ, ಕಾಂಪೌಂಡ್ ಗೋಡೆ ನಿರ್ಮಾಣ, ಸಸ್ಯಾಭಿವೃದ್ಧಿ ಮತ್ತು ಕ್ಷೇತ್ರ ನಿರ್ವಹಣೆಗಾಗಿ ವಿವಿಧ ಯೋಜನೆಗಳಡಿ ಒಟ್ಟು ರೂ.84.52 ಲಕ್ಷಗಳನ್ನು ವಿನಿಯೋಗಿಸಲಾಗಿದೆ. |

| | | |
|---|---|---|
| | | 2) 2018-19ನೇ ಸಾಲಿನಲ್ಲಿ ಸದರಿ ಕ್ಷೇತ್ರದಲ್ಲಿ ಸಸ್ಯಾಭಿವೃದ್ಧಿ, ಮೂಲಭೂತ ಸೌಕರ್ಯಗಳ ನಿರ್ಮಾಣ, ಕ್ಷೇತ್ರ ನಿರ್ವಹಣೆಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ರೂ.61.41 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>3) ಮಾನ್ವಿ ಪಟ್ಟಣದ ಕಛೇರಿ ಬಳಿಯಿರುವ ಸಸ್ಯಾಗಾರದಲ್ಲಿ ವಿವಿಧ ಅಲಂಕಾರಿಕ ಗಿಡಗಳನ್ನು ಕುಂಡಗಳಲ್ಲಿ ಅಭಿವೃದ್ಧಿಪಡಿಸಿ ತಾಲ್ಲೂಕಿನಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಿಗೆ ನೀಡಲಾಗುತ್ತಿದೆ.<br>4) ತಾಲ್ಲೂಕಿನ ರೈತರಿಗೆ ತೋಟಗಾರಿಕೆ ಇಲಾಖೆಯು ಅನುಷ್ಠಾನ ಮಾಡುತ್ತಿರುವ ವಿವಿಧ ಯೋಜನೆಗಳ ಸವಲತ್ತುಗಳನ್ನು ಹಾಗೂ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತಿದೆ.<br>5) ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ರಾಜಲಬಂಡಾ ತೋಟಗಾರಿಕೆ ಕ್ಷೇತ್ರದಲ್ಲಿ 2016-17ನೇ ಸಾಲಿನಲ್ಲಿ ರೂ.35.00 ಲಕ್ಷಗಳ ವೆಚ್ಚದಲ್ಲಿ ಕ್ಷೇತ್ರದ ಸುತ್ತ ಚೈನ್ ಲಿಂಕ್ ಫೆನ್ಸ್ ನಿರ್ಮಿಸಲಾಗಿದೆ. 2017-18ನೇ ಸಾಲಿನಲ್ಲಿ ರೂ.1.56 ಲಕ್ಷಗಳನ್ನು ವಿನಿಯೋಗಿಸಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ಲಿಂಬೆ ಮತ್ತು ಒಂದು ಹೆಕ್ಟೇರ್ ಪ್ರದೇಶದಲ್ಲಿ ಆಪಲ್ ಬೆರ್ ಬೆಳೆಸಲಾಗಿದೆ. 2018-19ನೇ ಸಾಲಿನಲ್ಲಿ ಹನಿ ನೀರಾವರಿ ಅಳವಡಿಸಲು ರೂ.2.90 ಲಕ್ಷ ಅನುದಾನ ಹಂಚಿಕೆ ಮಾಡಲಾಗಿದೆ. |

ಸಂಖ್ಯೆ: ತೋಇ 428 ತೋಇವಿ 2018

(ಎಂ.ಸಿ.ಮನಗೂಳಿ)

ತೋಟಗಾರಿಕೆ ಸಚಿವರು

LCQ 757

ಅನುಬಂಧ - 1

2018-19ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳುತ್ತಿರುವ ಯೋಜನೆಗಳು ಹಾಗೂ ನವೆಂಬರ್ 2018 ರ ಅಂತ್ಯಕ್ಕೆ ಪ್ರಗತಿ ವರದಿ

| ಕ್ರ.ಸಂ. | ಯೋಜನೆಗಳು | ವಾರ್ಷಿಕ ಆರ್ಥಿಕ ಪ್ರಗತಿಯ ವಿವರ ( ರೂ. ಲಕ್ಷಗಳಲ್ಲಿ) | | |
|---|---|---|---|---|
| | | ವಾರ್ಷಿಕ ಅನುದಾನ | ಬಿಡುಗಡೆ | ಸಾಧನೆ |
| **ಕೇಂದ್ರುವಲಯ ಯೋಜನೆಗಳು** | | | | |
| 1 | S-03 ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) | 385.00 | 198.67 | 175.92 |
| 2 | S-12 ರಾಷ್ಟ್ರೀಯ ತೋಟಗಾರಿಕೆ ಮಿಷನ್ | 620.36 | 395.65 | 76.13 |
| 3 | S-17 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 63.44 | 63.44 | 13.24 |
| 4 | S-13 ರಾಷ್ಟ್ರೀಯ ಆಯುಷ್ ಮಿಷನ್ | 1.20 | 0.00 | 0.00 |
| | **ಒಟ್ಟು** | **1070.00** | **657.76** | **265.29** |
| **ರಾಜ್ಯವಲಯ ಯೋಜನೆಗಳು** | | | | |
| 1 | S-02 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 19.89 | 4.90 | 4.90 |
| 2 | S-10 ಸಮಗ್ರ ತೋಟಗಾರಿಕಾ ಅಭಿವೃದ್ಧಿ | 176.43 | 117.62 | 103.04 |
| 3 | S-07 ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 16.35 | 9.00 | 8.90 |
| 4 | S-14 ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | 0.60 | 0.60 | 0.00 |
| 5 | S-11 ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | 32.99 | 8.25 | 8.25 |
| 6 | S-20 ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | 1.00 | 0.50 | 0.00 |
| 7 | S-24 ಕೃಷಿ ಭಾಗ್ಯ ಯೋಜನೆ | 100.04 | 82.97 | 22.34 |
| 8 | ಕರ್ನಾಟಕ ಜಲಾಯನ ಅಭಿವೃದ್ಧಿ ಯೋಜನೆ-II (ಸುಜಲಾ-III) | 44.30 | 29.53 | 2.69 |
| | **ಒಟ್ಟು** | **391.60** | **253.37** | **150.12** |
| **ಜಿಲ್ಲಾವಲಯ ಯೋಜನೆಗಳು** | | | | |
| 1 | D-02 ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ | 25.00 | 25.00 | 15.45 |
| 2 | D-03 ತೋಟಗಾರಿಕೆ ಕಟ್ಟಡಗಳು | 50.00 | 50.00 | 50.00 |
| 3 | D-04 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | 15.00 | 15.00 | 6.92 |
| 4 | D-05 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ | 6.00 | 6.00 | 3.92 |
| 5 | D-06 ಪ್ರಚಾರ ಮತ್ತು ಸಾಹಿತ್ಯ | 3.00 | 3.00 | 1.50 |
| 6 | D-09 ರೈತರಿಗೆ ಸಹಾಯ | 4.00 | 4.00 | 2.50 |
| 7 | D-10 ರೈತರಿಗೆ ತರಬೇತಿ | 1.00 | 1.00 | 0.00 |
| | **ಒಟ್ಟು** | **104.00** | **104.00** | **80.29** |
| | **ಒಟ್ಟಾರೆ** | **1565.60** | **1015.13** | **495.70** |